ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಅವರಿಂದ ವರದಿಯನ್ನು ನಿರೀಕ್ಷಣೆ ಮಾಡಿರಲಿಲ್ಲ. ವರದಿ ಬಂದಿಲ್ಲ ಮತ್ತು ಅದು ಬರಬೇಕಾಗಿಯೂ ಇಲ್ಲ. ಮತ್ತೆ ಯಾವುದೇ ಶಾಸಕರ ಬಗ್ಗೆ ದುರ್ವರ್ತನೆ ನಡೆದಿರುವ ಬಗ್ಗೆ ಯಾವುದೇ ವಿಧವಾದಂಥ ದೂರುಗಳು ಬಂದಿಲ್ಲ. ಸಂಪೂರ್ಣವಾಗಿ ಈ ಒಂದು ಆಪಾದನೆಯನ್ನು ನಿರಾಕರಣೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಮಾನ್ಯ ಮಲ್ಲಾರಗೌಡ ಪಟೀಲರು ಕೇಳಿದ ಪ್ರಶ್ನೆಗೆ ಉತ್ತರ ಬರಲಿಲ್ಲ. ಅವರು ನೇರವಾಗಿ ಕೇಳಿದಂಥ ಪ್ರಶ್ನೆ ಏನೆಂದರೆ ಯಾವ ಆಧಾರದಮೇಲೆ ಎಂ. ಎಲ್. ಎ. ಗಳನ್ನು ಸೆಲೆಕ್ಟ್ ಮಾಡಿದ್ದೀರಿ ? ಆಮೇಲೆ ನೀವು ಕಳಿಸಿದ್ದಂಥ ಶಾಸಕರಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಎಕ್ಸಪರ್ಟ್ಸ್ ಇದ್ದಾರೆಂದು ಕಳಿಸಿದಿರೋ ಅಥವಾ ನೋಡಿಕೊಂಡು ಬರಲಿ ಎಂದು ಕಳಿಸಿದಿರೋ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಎರಡನೆಯದಾಗಿ ಅವರನ್ನು ಕಳಿಸುವುದಕ್ಕಿಂತ ಸಂಬಂಧಪಟ್ಟ ಡೈರೆಕ್ಟೋರೇಟ್‌ನಲ್ಲಿ ಕೆಲಸ ಮಾಡತಕ್ಕಂಥ ಫಿಸಿಕಲ್ ಇನ್‌ಸ್ಟ್ರಕ್ಟರ್‌ಗಳನ್ನು, ಸ್ಪೋರ್ಟ್ಸ್‌ಮನ್‌ಗಳನ್ನು ಕಳಿಸಿದ್ದರೆ ಹೆಚ್ಚಿನ ಪ್ರಯೋಜನ ಆಗುತ್ತಿತ್ತು. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಬೇರೆ ಅಧಿಕಾರಿಗಳನ್ನು ಕೂಡ ಕಳಿಸಿದ್ದೇವೆ. ಇದು ಎರಡನೇ ಪ್ರಶ್ನೆಗೆ ಉತ್ತರ. ಯಾವ ಆಧಾರದ ಮೇಲೆ ಕಳಿಸಿದ್ದೀರೆಂದು ಕೇಳಿದ್ದೀರಿ. ಕ್ರೀಡಾಪಟುಗಳ ಹೆಸರುಗಳನ್ನು ಈಗಾಗಲೇ ಓದಿ ಹೇಳಿದ್ದೇನೆ. ಇವರ ಜೊತೆಗೆ ಅಧಿಕಾರಿಗಳು ಕೂಡ ಕೆಲವರು ಹೋಗಿದ್ದಾರೆ. ಯಾವ ಆಧಾರದ ಮೇಲೆ ಎಂಬುದಕ್ಕೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಸನ್ಮಾನ್ಯ ಶಾಸಕ ಮಹಾಶಯರು ಇಂತಹ ಕ್ರೀಡಾ ಸಮ್ಮೇಳನಕ್ಕೆ ಹೋದರೆ ಅಲ್ಲಿ ನಡೆಯುವಂಥ ಕಾರ್ಯಕ್ರಮಗಳಿಂದ ಪ್ರಭಾವಿತರಾಗಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೂಡ ಇಂತಹ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಟೇಡಿಯಂಗಳಿಗೆ ೫೦ ಸಾವಿರ ರೂಪಾಯಿಗಳನ್ನು ಕೊಡುವುದಕ್ಕೇ ನಿಮಗೆ ಆಗಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲಿ ಚಿಕ್ಕ ವ್ಯಾಯಾಮ ಶಾಲೆಗಳನ್ನು ಮಾಡಿ ಬೇಕೆಂದು ಐವತ್ತೈವತ್ತು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಅದನ್ನು ಕೊಡುವುದಕ್ಕೇ ಆಗಲಿಲ್ಲ.

ಶ್ರೀ ಜಿ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ; ಇಂತಹ ಕ್ರೀಡೆಗಳಿಗೆ, ಅಂತರರಾಷ್ಟ್ರೀಯ ಸಮ್ಮೇಳನಗಳಿಗೆ ಬಹಳ ವಯಸ್ಸಾಗಿರತಕ್ಕಂಥ ಲೋಕಸಭಾ ಸದಸ್ಯರನ್ನು ಕಳಿಸುವ ಕ್ರೈಟೀರಿಯಾ ಇರುವುದರಿಂದ ಕಳಿಸಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಇದೇನು ಲೋಕಸಭೆಯೋ ವಿಧಾನಸಭೆಯೋ ಗೊತ್ತಾಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ನನ್ನ ಆಕ್ಷೇಪ ಇದೆ. ವಯಸ್ಸಾದವರನ್ನು ಕಳಿಸುವುದಾದರೆ ಜಿ ಹೆಚ್. ಪಟೇಲರನ್ನು, ರಾಚಯ್ಯನವರನ್ನು ಕಳಿಸಬೇಕಾಗಿತ್ತು. ಡೆಲಿಗೇಶನ್ ಅನ್ನು ಇವರುಗಳೇ ಲೀಡ್ ಮಾಡಬೇಕಾಗಿತ್ತು.

ಶ್ರೀ ಜಿ. ಹೆಚ್. ಪಟೇಲ್.—ಒಂದಂತೂ ತಪ್ಪಾಗಿದೆ. ಮಹಿಳೆಯರು ಯಾರಾದರೂ ಹೋಗುವುದಕ್ಕೆ ಅಪೇಕ್ಷೆಪಟ್ಟಿದ್ದರೆ ಕಳಿಸಬಹುದಾಗಿತ್ತು.

ಶ್ರೀಮತಿ ಮುಕ್ತರುತ್ನೀಸಾ ಬೇಗಮ್.—ನಮ್ಮನ್ನು ಕೇಳಲೇ ಇಲ್ಲ. ನಮಗೆ ಗೊತ್ತೇ ಇರಲಿಲ್ಲ.

೧೯೮೫-೮೬ರಲ್ಲಿ ಲೋಕಸೇವಾ ಆಯೋಗವು ನಡೆಸಿದ ಗೆಜೆಟೆಡ್ ಪ್ರೊಬೇಷನರ್ಸ್ ಸ್ಪರ್ಧಾ ಪರೀಕ್ಷೆಯ ಬಗ್ಗೆ

೫೦ (೨೧೮) (ಬಿ), ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೫-೮೬ರಲ್ಲಿ ಲೋಕಸೇವಾ ಆಯೋಗವು ನಡೆಸಿದ ಗೆಜೆಟೆಡ್ ಹಾಗೂ ಪ್ರೊಬೇಷನರಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದರೆಂಬ ಕಾರಣಕ್ಕಾಗಿ ಅಭ್ಯರ್ಥಿಯೊಬ್ಬರ ಉತ್ತರ ಪತ್ರಿಕೆಗಳನ್ನು ಮರು ಮೌಲ್ಯಮಾಪನ ಮಾಡಿದ್ದು ನಿಜವೇ ?

ಆ) ಸದರಿ ಅಭ್ಯರ್ಥಿ ಪರೀಕ್ಷಾ ಕೋಡ್ ನಂಬರ್ ಪಡೆದು ಮೌಲ್ಯಮಾಪಕರನ್ನು ಸಂಧಿಸಿ, ಹೆಚ್ಚು ಅಂಕಗಳನ್ನು ಪಡೆದಿದ್ದು ನಿಜವಿದ್ದಲ್ಲಿ, ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಇ) ಆ ರೀತಿ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಅವರ ಮೇಲೆ ಈ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಅತಿ ಹೆಚ್ಚು ಅಂಕ ಪಡೆದರೆಂಬ ಕಾರಣದಿಂದಲೇ ಯಾರ ಉತ್ತರ ಪತ್ರಿಕೆಯನ್ನು ಮರು ಮೌಲ್ಯಮಾಪನ ಮಾಡಲಾಗಿಲ್ಲ. ಆದರೆ ಇಬ್ಬರು ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಸರಿಯಾಗಿ ಮೌಲ್ಯಮಾಪನ ಮಾಡದೆ ಅವರಿಗೆ ಅನುಕೂಲ ಮಾಡಿಕೊಡಲು ಪ್ರಯತ್ನ ಮಾಡಲಾಗಿದೆ ಎಂದು ಮಾಹಿತಿ ಬಂದ ಕಾರಣ ಅವರುಗಳ ಉತ್ತರ ಪತ್ರಿಕೆಗಳನ್ನು ಮಾತ್ರ ಮರು ಮೌಲ್ಯಮಾಪನ ಮಾಡಲಾಯಿತು.

ಆ) ಇದು ನಿಜವಲ್ಲ.

ಇ) ಮೇಲೆ (ಅ) ಮತ್ತು (ಆ)ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಇಬ್ಬರು ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಸರಿಯಾಗಿ ಮೌಲ್ಯಮಾಪನ ಮಾಡದೇ ಅವರಿಗೆ ಅನುಕೂಲ ಮಾಡಿಕೊಡಲು ಪ್ರಯತ್ನ ಮಾಡಲಾಗಿದೆ ಎಂಬ ದೂರು ಬಂದ ಕಾರಣ ಎಂದು ಹೇಳಿದ್ದಾರೆ. ಇದು ಅಸತ್ಯದಿಂದ ಕೂಡಿದ್ದು ಏಕೆಂದರೆ, ಆ ಪರೀಕ್ಷೆಯಲ್ಲಿ ಚಂದ್ರಪ್ಪ ಮತ್ತು ರಂಗೇಗೌಡ ಎಂಬ ಇಬ್ಬರು ಅಭ್ಯರ್ಥಿಗಳು ಕುಳಿತಿದ್ದರು ಅವರಿಗೆ ೯೨೪ ಅಂಕಗಳು ಬಂದಿದ್ದವು. ಇವರು ಹೆಚ್ಚು ಅಂಕಗಳನ್ನು ಪಡೆದುದರಿಂದ, ಅವರ ಉತ್ತರ ಪತ್ರಿಕೆಗಳನ್ನು ಮತ್ತೆ ಮೌಲ್ಯಮಾಪನ ಮಾಡಿಸಿ, ಅತಿ ಕಡಿಮೆ ಅಂಕಗಳನ್ನು ಕೊಡಿಸಿ, ಫೇಲ್ ಮಾಡಿದ್ದಾರೆ. ಇದಕ್ಕೆ ಲೋಕಾಸೇವಾ ಆಯೋಗದ ಕಾರ್ಯದರ್ಶಿಗಳಾದ ಅನಿರುದ್ಧ ದೇಸಾಯಿಯವರೂ ಕಾರಣರಾಗಿದ್ದಾರೆ. ಇದಕ್ಕೆ ಸಂಬಂಧಪಟ್ಟ ಕೋಡ್ ನಂಬರ್ ಇತ್ಯಾದಿ ವಿವರಗಳನ್ನು ತರಿಸಿ, ಇದು ಬಹಿರಂಗವಾದರೆ ನಮಗೆ ಕೆಟ್ಟ ಹೆಸರು ಬರುತ್ತದೆಂದು ಮರು ಮೌಲ್ಯಮಾಪನ ಮಾಡಿಸಿ, ಕಡಿಮೆ ನಂಬರು ಕೊಟ್ಟು ಫೇಲ್ ಮಾಡಿದ್ದಾರೆ. ಈ ಪ್ರಕರಣಕ್ಕೆ ಯಾರು ಕಾರಣರಾಗಿದ್ದರೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇಂತಹ ವಿಷಯಗಳನ್ನು ಲೋಕಾಯುಕ್ತಕ್ಕೆ ಕಳುಹಿಸಿ, ಶಿಸ್ತಿನ ಕ್ರಮ ತೆಗೆದುಕೊಳ್ಳದೇ ಹೋದರೆ, ಇಂತಹ ಅನ್ಯಾಯಗಳನ್ನು ತಡೆಗಟ್ಟುವುದು ಹೇಗೆ ?

ಶ್ರೀ ಎ. ಲಕ್ಷ್ಮೀನಾಗರ್ (ಮುಖ್ಯಮಂತ್ರಿಗಳ ಪರವಾಗಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು, ಲೋಕ ಸೇವಾ ಆಯೋಗದ ಕಾರ್ಯದರ್ಶಿಯವರ ಮೇಲೆ ಮಾಡಿರತಕ್ಕ ಆರೋಪವನ್ನು ನಾನು ಸಂಪೂರ್ಣವಾಗಿ ನಿರಾಕರಣೆ ಮಾಡುತ್ತೇನೆ. ಅನುಮಾನ ಬಂದ ಇಬ್ಬರು ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಮರು ಮೌಲ್ಯಮಾಪನ ಮಾಡಿದೆ. ಇವರನ್ನು ಫೇಲ್ ಮಾಡಿಸಬೇಕೆಂಬ ಕಾರಣಕ್ಕೋಸ್ಕರ ಮಾಡಿಲ್ಲ, ಯಾರೋ ತಪ್ಪು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದಾರೆ. ಇದನ್ನು ಅವರ ಮನಸ್ಸಿನಿಂದ ತೆಗೆದುಹಾಕಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ. ಯಾರು ಮೌಲ್ಯಮಾಪನವನ್ನು ಸರಿಯಾಗಿ ಮಾಡಿಲ್ಲ ಎಂದು ಕಂಡುಬಂದಿದೆ, ಅವರನ್ನು ಮತ್ತೆ ಈ ಕೆಲಸಕ್ಕೆ ನೇಮಕ ಮಾಡಬಾರದು ಎಂಬ ಕಾರ್ಯಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳಲಾಗಿದೆ.

ಶ್ರೀ ಬಿ. ಲಕ್ಕಪ್ಪ.—ಇದಕ್ಕೆ ಸಂಬಂಧಪಟ್ಟಂಥ ಕೋಡ್ ನಂಬರು ಏನು ಯಾರಿಗೆ ವ್ಯಾಲ್ಯುಯೇಷನ್ ಹಾಕಿತ್ತು ಎಂಬ ವಿವರಗಳೆಲ್ಲವೂ ಕಾರ್ಯದರ್ಶಿಯವರ ಹತ್ತಿರ ಇರುತ್ತದೆ. ಹೆಚ್ಚು ಅಂಕ ಬಂದಿದ್ದರೂ, ಅದನ್ನು ಪುನರ್ ಮೌಲ್ಯಮಾಪನ ಮಾಡುವುದಕ್ಕೆ ಏನು ಕಾರಣ ? ಇದರ ಬಗ್ಗೆ ಸರಿಯಾದ ಎನ್‌ಕ್ವೈರಿ ನಡೆಸಿ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇಬ್ಬರು ಅಭ್ಯರ್ಥಿಗಳ ಮೇಲೆ ಆರೋಪಣೆ ಬಂದ ಕಾರಣ ಈ ಇಬ್ಬರು ಅಭ್ಯರ್ಥಿಗಳ ಉತ್ತರ ಪತ್ರಿಕೆಗಳ ಬಗ್ಗೆ ಮರು ಮೌಲ್ಯಮಾಪನ ಮಾಡಲಾಯಿತು. ಇನ್ನು ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಬಿ. ಲಕ್ಕಪ್ಪ.—ಏನು ಆರೋಪ ಬಂದಿತ್ತು ಎಂಬುದನ್ನು ಹೇಳಬೇಕು, ಏಕೆ ಬಂತು ಎಂಬುದನ್ನು ಹೇಳಬೇಕು. ಈ ಇಬ್ಬರು ಅಭ್ಯರ್ಥಿಗಳು ಹೆಚ್ಚು ಅಂಕಗಳನ್ನು ಪಡೆದುದರಿಂದಲೇ...

ಶ್ರೀ ಎ. ಲಕ್ಷ್ಮೀಸಾಗರ್.—ಮೌಲ್ಯಮಾಪನದಲ್ಲಿ ಅನುಮಾನ ಇದೆ, ಸಂಶಯ ಇದೆಯೆಂದು ದೂರು ಬಂದುದರಿಂದ ಈ ಕೆಲಸ ಮಾಡಿದೆ.

ಶ್ರೀ ಬಿ. ಲಕ್ಕಪ್ಪ.—ದೂರು ಯಾವಾಗ ಬಂತು, ಏನೆಂದು ದೂರು ಬಂದಿದೆ.....

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ನೀವು ಇನ್ನು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಿಮಗೆ ಈಗಾಗಲೇ ಮೂರು ಸಾರಿ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಕಂಪ್ಲೇಂಟ್ ಬಂದದ್ದಕ್ಕಾಗಿ ಮರು ಮೌಲ್ಯಮಾಪನ ಮಾಡಿಸಿದ್ದೇವೆ ಎಂದು ಮಾನ್ಯ ಸಚಿವರೇ ಹೇಳಿದ್ದಾರೆ. ಕಂಪ್ಲೇಂಟ್ ಯಾರಿಂದ ಬಂದಿತ್ತು ಎಂದು ಅವರು ನೇರವಾಗಿ ಕೇಳುತ್ತಿದ್ದಾರೆ. ಅವರೇ ಉತ್ತರ ಕೊಟ್ಟಿದ್ದಾರೆ, ಕಂಪ್ಲೇಂಟ್ ಬಂದಿದ್ದ ಕಾರಣ ರಿವ್ಯಾಲ್ಯುಯೇಷನ್ ಮಾಡಿಸಿದ್ದೇವೆ ಎಂದು ಹೇಳಿದ್ದಾರೆ. ಕಂಪ್ಲೇಂಟ್ ಯಾರಿಂದ ಬಂತು ಮತ್ತು ಏನಂತ ಕಂಪ್ಲೇಂಟ್ ಕೊಟ್ಟಿದ್ದಾರೆ.

ಅಧ್ಯಕ್ಷರು.—ಹಾಫ್ ಅನ್ ಹವರ್ ಡಿಸ್ಕಷನ್‌ಗೆ ಹಾಕಿರಿ, ನೋಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ನೋಡಿ ಸ್ವಾಮಿ, ಈ ಇಬ್ಬರು ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಸರಿಯಾಗಿ ಮೌಲ್ಯಮಾಪನ ಮಾಡದೇ ಅವರಿಗೆ ಅನುಕೂಲ ಮಾಡಿಕೊಡಲು ಪ್ರಯತ್ನ ಮಾಡಿದ್ದಾರೆ ಎಂಬ ದೂರು ಬಂತು, ಯಾರಿಂದ ಬಂತು ಎಂಬುದರ ವಿವರ ನನ್ನ ಹತ್ತಿರ ಇಲ್ಲ, ಆದಕ್ಕೋಸ್ಕರ ಪುನರ್ ಮೌಲ್ಯಮಾಪನ ಮಾಡಲಾಯಿತು.

ಶ್ರೀ ಕೆ. ಲಕ್ಕಪ್ಪ.—ಅಧ್ಯಕ್ಷರೇ.....

ಅಧ್ಯಕ್ಷರು.—ಲಕ್ಕಪ್ಪನವರೇ ನೀವು ಕೂಡಿರಿ, ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಶ್ರೀ ಕೋಳಿವಾಡರವರೇ ನಿಮ್ಮ ಪ್ರಶ್ನೆಯನ್ನು ಕೇಳಿರಿ. Mr. Lakkappa, your speech will not be recorded. You please resume your seat You are taking undue advantage.

ರಾಣೆಬೆನ್ನೂರು ನಗರದಲ್ಲಿ ನಗರ ವಾಹನ ಸಾರಿಗೆಯೆನ್ನು ಪ್ರಾರಂಭಿಸುವುದು

೫೧ (೧೪೮) ಶ್ರೀ ಕೆ.ಬಿ. ಕೋಳೀವಾಡ್ (ರಾಣೆಬೆನ್ನೂರು).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಣೆಬೆನ್ನೂರು ನಗರವು ನಗರ ಪುರಸಭೆಯಾಗಿ ಪರಿವರ್ತನೆಯಾದ ನಂತರ ನಗರದಲ್ಲಿ ಓಡಾಡುವ ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಿಟಿ ಬಸ್ ವ್ಯವಸ್ಥೆಯನ್ನು ಪ್ರಾರಂಭಿಸಲು ಸರ್ಕಾರಕ್ಕೆ ಮನವಿಗಳು ಬಂದಿವೆಯೇ ?

ಆ) ಬಂದಿದ್ದಲ್ಲಿ ಈ ದಿಸೆಯಲ್ಲಿ ಯಾವ ಕ್ರಮವನ್ನು ಕೈಕೊಳ್ಳಲಾಗಿದೆ ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂಧೀಖಾನೆ ಮಂತ್ರಿಗಳು).—

ಅ) ಒಂದು ಮನವಿ ಬಂದಿರುತ್ತದೆ,

ಆ) ರಾಣೆಬೆನ್ನೂರು ಪಟ್ಟಣದ ವ್ಯಾಪ್ತಿಯು ಕಡಿಮೆ ಇರುವ ಕಾರಣ ಅಲ್ಲಿ ನಗರ ಅಥವಾ ಪಟ್ಟಣ ಸಾರಿಗೆಯನ್ನು ಪ್ರಾರಂಭಿಸುವ ಅವಶ್ಯಕತೆ ಕಂಡುಬಂದಿಲ್ಲ. ಆದರೂ ಸಾರ್ವಜನಿಕರ ಹಿತ ದೃಷ್ಟಿಯಿಂದ ಉಪನಗರ ಸಾರಿಗೆ ವ್ಯವಸ್ಥೆಯನ್ನು ಏರ್ಪಡಿಸಲು ಕ್ರಮ ಕೈಗೊಳ್ಳಲಾಗುವುದು.